**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS 76/2019** **DW- 1**

ದಿಃ **04.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿಸವಾಲುಃ ಪ್ರತಿವಾದಿ 3 ಮತ್ತು 4 ಪರ ಶ್ರೀ ಎಮ್ ಎಸ್ ಬಿ ವಕೀಲರಿಂದಃ**

ವಾದಪತ್ರದಲ್ಲಿ ಬರೆದ ಸಂಗತಿಗಳು ಗೊತ್ತು. ತಂದೆ ಆಸ್ತಿಗೆ ಮಗಳು ಕೇಸ್ ಹಾಕಿದ್ದಾಳೆ. ತಂದೆ ಆಸ್ತಿ ಬೇಕು ಅಂತಾ ಮಗಳು ಕೇಸ್ ಹಾಕಿದ್ದಾಳೆ. ತಾಯಿಗೆ ಹಾಗೂ ಮಗಳಿಗೆ ಆಸ್ತಿ ಬೇಕು ಅಂತಾ ಕೇಳಿದ್ದಾಳೆ. ನನಗೂ ಆಸ್ತಿ ಬೇಕು ಅಂತಾ ಎದುರು ಕ್ಲೇಮ್ ಸಲ್ಲಿಸಿದ್ದೇನೆ. ದಾವಾ ಆಸ್ತಿಯ ಸರ್ವೆ ನಂ.69, 135 ಇರುತ್ತದೆ. ಇವು ಬಾಗ ಆಗಿದ್ದು ಅವುಗಳ ನಂಬರ ಗೊತ್ತಿಲ್ಲ. ಇವೆರಡು ಸರ್ವೆ ನಂಬರಗಳನ್ನು ಹೊರತುಪಡಿಸಿ ಒಂದು ಮನೆ ಇದೆ. ಗುಡೇನಕಟ್ಟಿ ಗ್ರಾಮದಲ್ಲಿರುವ ಜಮೀನಿಗೆ ಮೂಲ ಮಾಲಿಕ ಚನ್ನಮ್ಮ ಇರುತ್ತಾರೆ. 1 ನೇ ಪ್ರತಿವಾದಿ ಚನ್ನಮ್ಮ ಇವರಿಗೆ ಮೊಮ್ಮಗ ಆಗಬೇಕು. ದಾವಾ ಸ್ವತ್ತುಗಳು ಚನ್ನಮ್ಮ ಇವರಿಗೆ ತವರು ಮನೆಯಿಂದ ಬಂದ ಸ್ವತ್ತುಗಳು ಎಂದರೆ ಸರಿ. ಚನ್ನಮ್ಮ ತನ್ನ ಜಿವಿತ ಅವಧಿಯಲ್ಲಿ ನಾಗಪ್ಪ ಮತ್ತು ನಿಂಗಪ್ಪ ಇವರಿಗೆ ಮೃತ್ಯು ಪತ್ರ ಮಾಡಿಕೊಟ್ಟಿದ್ದರು ಎಂದರೆ ಸರಿ. ನಾಗಪ್ಪ ಮತ್ತು ನಿಂಗಪ್ಪ ತೀರಿಕೊಂಡ ನಂತರ ವಾರಸಾ ಪ್ರಕಾರ 1 ನೇ ಪ್ರತಿವಾದಿಗೆ ದಾವಾ ಆಸ್ತಿಗಳು ಬಂದವು ಎಂದರೆ ಸರಿ. ನಾಗಪ್ಪ ಮತ್ತು ನಿಂಗಪ್ಪ ತೀರಿಕೊಂಡ ನಂತರ 1 ನೇ ಪ್ರತಿವಾದಿ ಹಾಗೂ ಆತನ ಸಹೋದರ ಮಲ್ಲಪ್ಪ ವಾರಸುದಾರರು ಇದ್ದರು. ನಾಗಪ್ಪ ನಿಂಗಪ್ಪ ಇವರಿಗೆ 1 ನೇ ಪ್ರತಿವಾದಿ ಮತ್ತು ಮಲ್ಲಪ್ಪ ಹೊರತುಪಡಿಸಿ ಬೇರೆ ಯಾರು ವಾರಸುದಾರರು ಇರಲಿಲ್ಲ ಎಂದರೆ ಸರಿ. ನಾಗಪ್ಪ ಮತ್ತು ನಿಂಗಪ್ಪ ತೀರಿಕೊಂಡ ನಂತರ 1 ನೇ ಪ್ರತಿವಾದಿ ಹಾಗೂ ಮಲ್ಲಪ್ಪ ದಾವಾ ಆಸ್ತಿಗಳಿಗೆ ಸಂಪೂರ್ಣ ಮಾಲಿಕರು ಆದರು ಎಂದರೆ ಸರಿ.

2. ಮಲ್ಲಪ್ಪನಿಗೆ ಬೇರೆ ಆಸ್ತಿಗಳು ಹೋದವು. ದಾವಾ ಆಸ್ತಿಗಳು 1 ನೇ ಪ್ರತಿವಾದಿಗೆ ಬಂದವು ಎಂದರೆ ಸರಿ. ಆ ಪ್ರಕಾರ 1 ನೇ ಪ್ರತಿವಾದಿ ತನ್ನ ಹೆಸರುಗಳನ್ನು ಉತಾರೆಯಲ್ಲಿ ದಾಖಲಿಸಿಕೊಂಡು ಮಾಲ್ಕಿ ನಾತೆಯಿಂದ ಕಬ್ಜಾ ವಹಿವಾಟಿ ಮಾಡಿಕೊಂಡು ಬಂದರು ಎಂದರೆ ಸರಿ. 1 ನೇ ಪ್ರತಿವಾದಿ 3 ಮತ್ತು 4 ನೇ ಪ್ರತಿವಾದಿಗೆ ಕೆಲ ಆಸ್ತಿಗಳನ್ನು

ಖರೀದಿ ಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಈಗ ಯಾರ ಹೆಸರಿನಲ್ಲಿವೆ ಏನು ವ್ಯವಹಾರ ಆಗಿದೆ ಅಂತಾ ನೋಡಿ ತಿಳಿದುಕೊಂಡು ಬಂದೆ ಸಾಕ್ಷಿ ನುಡಿಯುತ್ತಿದ್ದೇನೆ. ಸಾಮಾನ್ಯವಾಗಿ ಯಾರು ಮಾಲಕರು ಇರುತ್ತಾರೊ ಅವರ ಹೆಸರು ಉತಾರೆಯಲ್ಲಿ ದಾಖಲಾಗಿ ಅವರೇ ಕಬ್ಜಾ ವಹಿವಾಟಿ ಮಾಡುತ್ತಿರುತ್ತಾರೆ ಎಂದರೆ ಸರಿ. ದಾವಾ ಶೆಡ್ಯೂಲ್  ಬ 1 ನೇ ಸ್ವತ್ತು ಪ್ರತಿವಾದಿ 3 ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸುಳ್ಳು ಹೆಸರು ದಾಖಲಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ 2 ನೇ ಸ್ವತ್ತು 4 ನೇ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವಾ 3 ನೇ ಸ್ವತ್ತು ಪ್ರಭು ತಂದೆ ಮಲ್ಲಪ್ಪ ಕಲ್ಲೂರ ಮತ್ತು 1 ನೇ ಪ್ರತಿವಾದಿ ಇವರ ಹೆಸರಿನಲ್ಲಿ ಜಂಟಿಯಾಗಿ ಇದೆ ಎಂದರೆ ಸರಿ. ನಾನು ಹಾಕಿದ್ದೇನೆ ಅಂತಾ ಹೇಳುವ ಎದುರು ಕ್ಲೆಮನಲ್ಲಿ ಪ್ರಬು ಕಲ್ಲೂರ ಇವರನ್ನು ಪಾರ್ಟಿ ಮಾಡಿಲ್ಲ. ಸರ್ವೆ ನಂ.69/5 ರಲ್ಲಿ ಯಾರಿಗೆ ಯಾವ ಬಾಗ ಅಂತಾ ವಿಬಾಗವಾಗಿಲ್ಲ ಎಂದರೆ ಸರಿ. ದಾವಾ 4 ನೇ ಸ್ವತ್ತು ನನ್ನ ಗಂಡನ ಹೆಸರಿನಲ್ಲಿ ಇದೆ. ಅದರ ನಂಬರ ನೆನಪಿಲ್ಲ.

3. ನನಗೆ 60 ವರ್ಷ ವಯಸ್ಸು. ನನ್ನ ಜನನ ದಾಖಲಾತಿ ಇದೆ. 1984 ರಲ್ಲಿ ನನಗೆ 18 ವರ್ಷ ವಯಸ್ಸಾಗಿತ್ತು. 1984 ರಲ್ಲಿ ನನಗೆ 18 ವರ್ಷ ವಯಸ್ಸಾಗಿತ್ತು ಅಂತಾ ತೊರಿಸಲು ಶಾಲಾ ದಾಖಲಾತಿ ನೀಡಿಲ್ಲ ಎಂದರೆ ಸರಿ. ಆದರೆ ಆದಾರ ಕಾರ್ಡ್, ಗುರುತಿನ ಚೀಟಿ ನೀಡಿದ್ದೇನೆ. ಶಾಲಾ ದಾಖಲಾತಿಗಳಲ್ಲಿ ಆ ವ್ಯಕ್ತಿ ಯಾವಾಗ ಜನಿಸಿದ್ದಾನೆ ಅಂತಾ ನಿಖರವಾದ ಜನನ ದಾಖಲಾತಿ ಇರುತ್ತದೆ ಎಂದರೆ ಸರಿ. ಆದಾರ ಕಾರ್ಡ್ ಮತ್ತು ಚುನಾವಣಾ ಗುರುತಿನ ಚೀಟಿಯಲ್ಲಿ ನಾವು ಹೇಳಿದಂತೆ ದಾಖಲಿಸುತ್ತಾರೆ ಎಂದರೆ ಸರಿಯಲ್ಲ. ಮದುವೆಗೆ ಹೆಣ್ಣು ಮಗಳು 18 ವರ್ಪೆ ಸಂಪೂರ್ಣ ಆಗಿರಬೇಕು ಎಂದರೆ ಸರಿ.  ನನ್ನ ಹುಟ್ಟಿದ ತಾರೀಖು ನೆನಪಿಲ್ಲ. ನಿಪಿ.29 ನನಗೆ ಸೇರಿದ ಆದಾರಕಾರ್ಡನಲ್ಲಿ ನನ್ನ ಜನನ ದಿನಾಂಕ 22.06.1967 ಇದೆ ಎಂದರೆ ಸರಿ. ಈ ಆದಾರಕಾರ್ಡ ಪ್ರಕಾರ 1984 ರಲ್ಲಿ ನನಗೆ 17 ವರ್ಷ ಸಂಪೂರ್ಣ ಆಗಿರಲಿಲ್ಲ ಎಂದರೆ ಸರಿ. ಆದಾರಕಾರ್ಡ ಮಾಡಿಸುವಾಗ ಶಾಲಾ ದಾಖಲಾತಿ ಕೊಟ್ಟಿದ್ದೆ ಎಂದರೆ ಸರಿ. ಹುಡುಗಿಗೆ 18 ವರ್ಷ ಹುಡುಗನಿಗೆ 21 ವರ್ಷ ಆಗಿ ಮದುವೆಯಾದರೆ ಅದು ಕಾನೂನುಬದ್ದ ಮದುವೆ ಎಂದರೆ ಸರಿ. 1984 ರಲ್ಲಿ ನನಗೆ 18 ವರ್ಷ ಆಗಿತ್ತು ಅಂತಾ ತೊರಿಸಲು ದಾಖಲಾತಿ ಇಲ್ಲ ಎಂದರೆ ಸರಿ.

4. ನಾನು ರೆಡ್ಡಿ ಸಮಾಜಕ್ಕೆ ಸೇರಿದವರು ಎಂದರೆ ಸರಿ. ರೆಡ್ಡಿ ಸಮಾಜದವರು

ಸ್ವಾಮಿಗಳನ್ನು ಕರೆಸಿ ಹಿಂದೂ ಸಂಪ್ರದಾಯದ ಪ್ರಕಾರ ಮದುವೆ ಮಾಡಿಸುತ್ತಾರೆ ಎಂದರೆ ಸರಿ. ನಾನು ಲಿಂಗಾಯತ ರೆಡ್ಡಿ ಎಂದರೆ ಸರಿ. ನನ್ನ ಮುಖ್ಯ ಹೇಳಿಕೆ ಮತ್ತು ತಕರಾರಿನಲ್ಲಿ ಯಾವ ಸ್ವಾಮಿಗಳು ಬಂದು ನನ್ನ ಮದುವೆ ಮಾಡಿಸಿದ್ದರು ಅಂತಾ ಬರೆಸಿಲ್ಲ ಆದರೆ ಹಳಿಯಾಳದ ಸ್ವಾಮಿಗಳು ಬಂದಿದ್ದರು. ಆ ಸ್ವಾಮಿಗಳ ಹೆಸರು ವಿವರ ಬರೆದಿಲ್ಲ ಎಂದರೆ ಸರಿ. ನನ್ನ ತಕರಾರಿನಲ್ಲಿ ಮದುವೆ ಯಾವ ಸಂಪ್ರದಾಯದ ಪ್ರಕಾರ ಆಗಿದೆ ಅಂತಾ ಬರೆದಿಲ್ಲ ಎಂದರೆ ಸರಿ. ನನ್ನ ಮುಖ್ಯಹೇಳಿಕೆಯಲ್ಲಿ ನಮ್ಮ ಮದುವೆಗೆ ಯಾವ ಸಂಪ್ರದಾಯ ಆಚರಣೆ ಮಾಡಿದೆ ಅಂತಾ ಬರೆದಿಲ್ಲ ಎಂದರೆ ಸರಿ.

5. 1 ನೇ ಪ್ರತಿವಾದಿ ಪಾರವ್ವ ಎನ್ನುವವರನ್ನು ಈಗ 35 ವರ್ಷಗಳ ಹಿಂದೆ ಮದುವೆಯಾಗಿ ಅವರ ಜೊತೆ ಜೀವನ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಪಾರವ್ವ ಮತ್ತು 1 ನೇ ಪ್ರತಿವಾದಿ ಕೂಡಿ ಇದ್ದಾರೆ ಎಂದರೆ ಸರಿ. ನಾನು ಹೇಳುವಂತೆ ಮದುವೆಯಾದಾಗಿನಿಂದ 1 ನೇ ಪ್ರತಿವಾದಿ ನನ್ನ ಜೊತೆ ಯಾವತ್ತು ಇಲ್ಲ ಎಂದರೆ ಸರಿಯಲ್ಲ. ನಾನು ಬೇರೆ ಮನೆಯಲ್ಲಿ ವಾಸ ಮಾಡುತ್ತಿದ್ದೆ ಎಂದರೆ ನಮ್ಮ ಅತ್ತೆಯವರ ಮನೆಯಲ್ಲಿ ವಾಸ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಮತ್ತು ಪಾರವ್ವ ಒಂದೇ ಮನೆಯಲ್ಲಿ ಇದ್ದಾರೆ ಎಂದರೆ ಸರಿ. ನನ್ನ ಮದುವೆ ಆಗಿದೆ ಅಂತಾ ತೊರಿಸಲು ಲಗ್ನ ಪತ್ರ, ಪೊಟೊ ಇವೆಯಾ ಅಂತಾ ಕೇಳಿದ ಪ್ರಶ್ನೆಗೆ ಸಾಕ್ಷಿ ಲಗ್ನ ಪತ್ರ ಇದ್ದು ಅದು ಸಿಕ್ಕಿಲ್ಲ ಎಂದು ನುಡಿಯುತ್ತಾರೆ. ಯಾವ ಪ್ರಿಂಟಿಂಗ ಪ್ರೆಸನಲ್ಲಿ ಲಗ್ನ ಪತ್ರ ಚಾಪಿಸಿದ್ದು ಎನ್ನುವುದು ಗೊತ್ತಿಲ್ಲ ಅದು ಹಿರಿಯರಿಗೆ ಗೊತ್ತು. ಮದುವೆ ಆಗುವಾಗ ಮುಹೂರ್ತ ಸಂವತ್ಸರ ಬಗ್ಗೆ ನನ್ನ ತಕರಾರಿನಲ್ಲಿ ಬರೆದಿಲ್ಲ ಎಂದರೆ ಸಾಕ್ಷಿ ಬರೆದಿದ್ದೇನೆ ಎಂದು ನುಡಿಯುತ್ತಿದ್ದು ಸಾಕ್ಷಿ ಮುಂದುವರೆದು ದಿಃ 03 ನೇ ತಾರೀಖು 1984 ರಲ್ಲಿ ಆಗಿದ್ದು ಈಶ್ವರ ಗುಡಿ ಹಳಿಯಾಳದಲ್ಲಿ ಮದುವೆ ಆಗಿದ್ದು ಬೆಳಿಗ್ಗೆ 10 ಗಂಟೆಗೆ ಅಕ್ಕಿ ಕಾಳು ಬಿದ್ದವು ಎಂದು ನುಡಿಯುತ್ತಾರೆ. ದೇವಸ್ಥಾನಲ್ಲಿ ಮದುವೆಯಾದರೆ ಕಮಿಟಿಯವರು ಒಂದು ರಶೀದಿ ಕೊಡುತ್ತಿದ್ದು ಅದನ್ನು ನಾನು ಹಾಜರುಪಡಿಸಿಲ್ಲ. ಊರು ಒಳಗಡೆ ದೇವಸ್ಥಾನ ಇದ್ದಾಗ ಅದನ್ನು ಊರಿನ ಕಮೀಟಿಯವರು ನಿರ್ವಹಣೆ ಮಾಡುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಜೊತೆ ನನ್ನ ಮದುವೆಯಾಗದೇ ಇದ್ದರೂ ಸಹ ಮದುವೆ ಆಗಿದೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿ ಹೆಂಡತಿ ಅಲ್ಲ ಹಾಗೂ ವಾದಿ 1 ನೇ ಪ್ರತಿವಾದಿಗೆ

ಜನಿಸಿದ ಮಗಳೆ ಅಲ್ಲ ಎಂದರೆ ಸರಿಯಲ್ಲ. ವಾದಿಗೂ ಮತ್ತು ನನಗೂ ದಾವಾ ಆಸ್ತಿಗಳಲ್ಲಿ ಯಾವದೇ ಹಕ್ಕು ಇರದೇ ಇದ್ದರೂ ಸಹ 1 ನೇ ಪ್ರತಿವಾದಿ, 3 ಮತ್ತು 4 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನದು ಮತ್ತು ವಾದಿಯದ್ದು ಒಂದೇ ಗುಟ್ಟು ಎಂದರೆ ಸರಿ. ವಾದಿ ಹೇಳಿದಂತೆ ನಾನು ಈ ದಾವೆಯಲ್ಲಿ ಕೇಳುತ್ತೇನೆ ಎಂದರೆ ಸರಿಯಲ್ಲ. ವಾದಿಯ ಕೇಸಿಗೆ ಅನುಕೂಲವಾಗಲಿ ಎಂದು ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿ. ತಕರಾರಿನಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

**ಶ್ರೀ ಜೆ ಟಿ ಎಮ್ ವಕೀಲರು 1 ನೇ ಪ್ರತಿವಾದಿ ಪರ ಮೇಲಿನ ಪಾಟಿಸವಾಲನ್ನು ಅಳವಡಿಸಿಕೊಳ್ಳುತ್ತಿದ್ದಾರೆ.**

**ವಾದಿ ಪರ ವಕೀಲರು ಗೈರು ಹಾಜರು ಇರುವುದರಿಂದ ಅವರ ಪರ ಪಾಟಿಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(**ಶ್ರೀ ರಮೇಶ ಎಸ್ ಗಾಣಿಗೇರ**)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.